ಪರಿಹಾರ ಏನು, ಎಷ್ಟು ಹೇಳಿ? ನಾನು ಕೊಡುವುದಕ್ಕೆ ಸಿದ್ಧವಾಗಿದ್ದೀನಿ, ವಿಷಯ ಇಲ್ಲಿಗೇ ಇತ್ಯರ್ಥ ಮಾಡಿ ಬಿಟ್ಟು ಬಿಡಿ'' ಕುಮುದಿನಿ ಗಂಡ ಅಂಗಲಾಚಿ ಬೇಡಿಕೊಳ್ಳುತ್ತಿದ್ದ. ಅಷ್ಟರಲ್ಲಿ ಅಪರಿಚಿತ ಗೊಗ್ಗರು ಧ್ವನಿ ಬಂತು.

''ಮಾಡುವುದು ಮಾಡಿ, ನೋಡಿ ಈಗ ಇವ ಮಾತನಾಡುವುದು? ಜೀವದ ಬೆಲೆ ಗೊತ್ತಾ ನಿನಗೆ? ನೋಡು ರಕ್ತ ಹೇಗೆ ಹರಿದುಹೋಗುತ್ತಿದೆ ಅಂತ. ಪಾಪ ಎಳತು ಬೇರೆ. ಕಾರು ಗುದ್ದಿದ ರಭಸಕ್ಕೆ ನಮ್ಮ ಮನೆಯ ಗೇಟು ಬೆಂಡಾಗಿ ಒಳ ಹೋಗಿದೆ. ನೀನು ಕಣ್ಣು ಮುಚ್ಚಿ ಕಾರು ಬಿಡುವುದಾ?'' ಅವರು ದಬಾಯಿಸುತ್ತಿದ್ದರು. ಕುಮುದಿನಿಯ ತಲೆ ಗಿರ್ರನೆ ತಿರುಗುತ್ತಿತ್ತು. ಇವರು ಆಕ್ಸಿಡೆಂಟ್ ಮಾಡಿ ಯಾರದ್ದೋ ಪ್ರಾಣಕ್ಕೆ ಕುತ್ತು ತಂದಿರುವುದಂತು ಖಚಿತ. ಅದೇನೊ ಎಳತು ಎಳತು ಅಂತ ಹೇಳುತ್ತಿದ್ದಾರೆ. ಮಗುವಿಗೆ ಏನಾದರೂ ಆಯಿತಾ? ಅಯ್ಯೋ ದೇವರೇ ಏನಾಗದಿರಲಿ. ಅವಳು ದೇವರ ಕೋಣೆಗೆ ಓಡಿದಳು. ಕೈ ಮುಗಿಯುವುದಕ್ಕೂ ಆಗುತ್ತಿಲ್ಲ. ಮತ್ತೆ ಮೊಬೈಲ್ ಕಿವಿಯ ಹತ್ತಿರ ತಂದಳು. ಈಗ ಬೇರೊಂದು ತುಸು ಮೆತ್ತಗಿನ ಸ್ವರ.

''ಹೀಗೆ ನಿಂತುಕೊಂಡು ಅವನನ್ನು ದಬಾಯಿಸಿದರೆ ಏನು ಬಂತು? ಆಸ್ಪತ್ರೆಗೆ ಹೋಗುವ ವ್ಯವಸ್ಥೆ ಮಾಡಿ. ಇನ್ನೂ ಹೀಗೆ ನೋಡಿಕೊಂಡು ಇದ್ದರೆ ಉಸಿರು ನಿಲ್ಲುತ್ತೆ. ಅವನ ಗಾಡಿ ದಾಖಲೆ ಎಲ್ಲಾ ತೆಗೆದಿಟ್ಟುಕೊಳ್ಳಿ. ಪೊಲೀಸ್ ಕೇಸ್ ಮಾಡುವ. ಜೈಲಿನಲ್ಲಿ ಸ್ವಲ್ಪ ಸೊಳ್ಳೆ ಕಚ್ಚಿಸಿಕೊಂಡು ಒದೆ ತಿಂದು, ಒಣ ರೊಟ್ಟಿ ಜಗೀಲಿ. ಬುದ್ಧಿ ಬರುತ್ತೆ'' ಕುಮುದಿನಿ ಕೋಣೆಯ ಗೋಡೆಗೆ ಒರಗಿಕೊಂಡೇ ನೆಲಕ್ಕೆ ಜಾರಿದಳು. ಧ್ವನಿ ಮತ್ತೂ ಕೇಳಿಸುತ್ತಿತ್ತು.

''ದಯವಿಟ್ಟು ಅದೆಲ್ಲಾ ಬೇಡ. ನಾನು ಸರಕಾರಿ ಕೆಲಸದಲ್ಲಿ ಇರುವುದು, ಕೇಸು ಕೋರ್ಟು ಕಟ್ಲೆ ಅಂದರೆ ನನ್ನ ಕೆಲಸಕ್ಕೆ ಕುತ್ತು ಬರುತ್ತದೆ. ಈಗ ನಾನು ಏನು ಮಾಡಬೇಕು ಹೇಳಿ?" ಕುಮುದಿನಿಯ ಗಂಡ ಮತ್ತೆ ಮತ್ತೆ ಬೇಡಿಕೊಳ್ಳುತ್ತಿದ್ದ. ಅವರು ತುಂಬಾ ಜನ ಇದ್ದಿರಬೇಕು. ಆಗ ಮತ್ತೊಂದು ಪಿಸು ಧ್ವನಿ ಕೇಳಿಸಿತು. ಬಹುಶಃ ಕಿವಿಯ ಹತ್ತಿರ ಬಂದು ಮಾತನಾಡಿರಬೇಕು ಆಸಾಮಿ.

''ನೋಡು, ನಾನೊಂದು ಮಾತು ಹೇಳುತ್ತೇನೆ. ಹಾಗೆ ಮಾಡು. ಈಗ ಇದು ಇಲ್ಲಿ ಜೀವ ಬಿಟ್ಟರೆ ಖಂಡಿತಾ ಕೇಸಾಗುತ್ತದೆ. ತಪ್ಪು ನಿನ್ನದೇ ಅಲ್ವಾ. ಒಳ ರಸ್ತೆಯಾದ ಕಾರಣ ಯಾರೂ ನಮ್ಮನ್ನು ಗಮನಿಸಿಲ್ಲ. ನೀನು ಬಂದು ಗುದ್ದಿದ ರಭಸಕ್ಕೆ ಮಾರ್ಗಕ್ಕೆ ಎಸೆಯಲ್ಪಟ್ಟು ಡಾಮರು ತಲೆಗೆ ಬಡಿದು ಇನ್ನೇನು ಪ್ರಾಣ ಹೋಗುವುದರಲ್ಲಿ ಇದೆ. ಖಂಡಿತಾ ಬದುಕುವ ಯಾವ ಅವಕಾಶವೂ ಇಲ್ಲ. ಕೇಸು ಕೋರ್ಟು ಅಂತ ನೀನು ಅಲೆದಾಡಿ ಕೆಡಬೇಕು. ದೇಹ ಶವ ಆದರೆ ಯಾರಿಗೂ ಬೇಡ.''

''ಅಯ್ಯೋ... ದಯವಿಟ್ಟು ಆಸ್ಪತ್ರೆಗೆ ತೆಗೆದುಕೊಂಡು ಹೋಗುವುದಕ್ಕೆ ಬಿಡಿ. ಆಮೇಲೆ ಮಾತನಾಡೋಣ.''

''ಆಸ್ಪತ್ರೆಗೆ ತೆಗೆದುಕೊಂಡು ಹೋದರೂ ಪ್ರಾಣ ಉಳಿಯುತ್ತೆ ಅಂತೀಯಾ? ನೀನೇನೋ ನಿನ್ನ ಸ್ವಂತ ಮಗು ಅನ್ನುವ ಹಾಗೆ ಆಡುತ್ತೀಯಾ? ಆಸ್ಪತ್ರೆ ಅದು ಇದೂ ಅಂತ ಹೋದರೆ ದುಡ್ಡೂ ಖರ್ಚು. ಏನೂ ಎತ್ತ ವಿಚಾರಣೆ ಆಗುತ್ತದೆ, ಅಷ್ಟೇ. ಅದಕ್ಕೆ ನಾವೊಂದು ಉಪಾಯ ಹೇಳುತ್ತೀವಿ ಕೇಳು. ಇಲ್ಲಿ ಪಕ್ಕದಲ್ಲಿ ಕಸಾಯಿಖಾನೆ ಇದೆ. ಅದು ಅನಧಿಕೃತ. ಅಲ್ಲಿ ಯಾವುದನ್ನೂ ಮಾಂಸ ಮಾಡುತ್ತಾರೆ. ನಾಯಿ, ನರಿ, ಮನುಷ್ಯ ಆದ್ರು ಅವರಿಗೆ ಅಡ್ಡಿಯಿಲ್ಲ. ಮಾಂಸ ಆದ್ರೆ ಸಾಕು. ಪ್ರಾಣ ಹೋಗುವುದಕ್ಕಿಂತ ಮೊದಲು ಅಲ್ಲಿಗೆ ತೆಗೊಂಡು ಹೋಗೋಣ. ಚೂರಿ ಹಾಕಿದರೆ ಒಂದೊಂದು ಅಂಗಕ್ಕೂ ಇಷ್ಟು ಅಂತ ಬೆಲೆ ಕಟ್ಟುತ್ತಾರೆ. ಹೇಗೂ ಸಾಯುತ್ತೆ. ಎಳೆಯ ಮಾಂಸ, ಯಾರದ್ದಾದರೂ ಹೊಟ್ಟೆ ತುಂಬಲಿ. ಈಗೆಲ್ಲಾ ಈ ಮಾಂಸಕ್ಕೆ ಎಂಥ ಕ್ರಯ ಅನ್ನುತ್ತಿ! ಅಲ್ಲಿ ದುಡ್ಡಿನ ವಿಚಾರ ನಾವು ಮಾತನಾಡಿಕೊಳ್ಳುತ್ತೇವೆ. ಇದನ್ನು ಮಾತ್ರ ಅಲ್ಲಿಗೆ ನಿನ್ನ ಗಾಡಿಯಲ್ಲಿಯೇ ಸಾಗಿಸಬೇಕು. ಆಮೇಲೆ ನಮ್ಮ ಗೇಟ್ ರಿಪೇರಿಗೆ ಅಂತ ಒಂದಿಷ್ಟು ದುಡ್ಡು ಕೊಟ್ಟು ಹೊರಡು. ಇಷ್ಟಕ್ಕೆ ಎಲ್ಲಾ ಮುಗಿಯಿತು ಅಲ್ವಾ?''

"ಸರಿ, ಹಾಗೆ ಮಾಡುತ್ತೇನೆ" ಕುಮುದಿನಿಯ ಗಂಡನ ಪೇಲವ ಧ್ವನಿ.

ಕುಮುದಿನಿ ಕೈಯಿಂದ ಮೊಬೈಲ್ ಕೆಳಬಿತ್ತು. ಶಿವನೇ! ಇಷ್ಟು ಸಮಯ ಈ ಕಟುಕನ ಜೊತೆ ನಾನು